ಕನ್ನಡಪ್ರಭ
ಬುಧವಾರ 6.05.2026

ಗರಿಷ್ಠ 36 c | ಕನಿಷ್ಠ 23 c

## ಸುದ್ದಿ ಸಿಂಚನ

### ಇಂದು ಸಂದರ್ಶನ

**ಭಟ್ಕಳ:** ಶ್ರೀ ಗುರು ಸುಧೀಂದ್ರ ಕಾಲೇಜಿನಲ್ಲಿ ಬೆಂಗಳೂರಿನ ರುಪೀ ಬಾಸ್ ಕಂಪನಿಯವರು ರಿಲೇಶನಶಿಪ್ ಮ್ಯಾನೇಜರ್‌ಹುದ್ದೆಗೆ ಮೇ 6ರಂದು ಸಂದರ್ಶನ ಆಯೋಜಿಸಿದ್ದಾರೆ. ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ, ಬಿಎ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಭಾಗವಹಿಸಬಹುದು. ಆಸಕ್ತರು ಮೇ 6ರಂದು ಬೆಳಗ್ಗೆ 10 ಘಂಟೆಗೆ ಕಾಲೇಜಿನಲ್ಲಿ ಹಾಜರಿರಲು ಸೂಚಿಸಲಾಗಿದೆ.

### ರೈಲ್ವೆ ನಿಲ್ದಾಣಕ್ಕೆ ತೆರಳಲು ಬಸ್ ವ್ಯವಸ್ಥೆ ಕಲ್ಪಿಸಲು ಸಚಿವರಿಗೆ ಮನವಿ

**ಗೋಕರ್ಣ:** ಇಲ್ಲಿನ ಬಸ್ ನಿಲ್ದಾಣದಿಂದ ರೈಲ್ವೆ ನಿಲ್ದಾಣಕ್ಕೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಸಾರಿಗೆ ಸಚಿವರಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ. ಇತ್ತೀಚಿಗೆ ಇಲ್ಲಿಗೆ ಭೇಟಿ ನೀಡಿದಾಗ ಇಲ್ಲಿಂದ ಹತ್ತು ಕಿಮೀ ದೂರದಲ್ಲಿರುವ ರೈಲ್ವೆ ನಿಲ್ದಾಣಕ್ಕೆ ಬಸ್ ಸೌಕರ್ಯವಿಲ್ಲದೆ ನಿತ್ಯ ಪ್ರವಾಸಿಗರು, ಯಾತ್ರಿಕರು ತೊಂದರೆ ಅನುಭವಿಸುತ್ತಿರುವುದನ್ನ ಸ್ವತಃ ಅರಿತ ರೇವಣ್ಣನವರು, ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ವಿವರಿಸಿ ಜನರಿಗೆ ಅನುಕೂಲತೆ ಒದಗಿಸಲು ವಿನಂತಿಸಿದ್ದಾರೆ.

### ರಂಗಸಹ್ಯಾದ್ರಿ ಶಿಬಿರಕ್ಕೆ ಕೋಣೆಮನೆ ಭೇಟಿ

**ಯಲ್ಲಾಪುರ:** ರಂಗಸಹ್ಯಾದ್ರಿ ಬೇಸಿಗೆ ಶಿಬಿರಕ್ಕೆ ವಿಶ್ವದರ್ಶನ ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ್ ಕೋಣೆಮನೆ ಭೇಟಿ ನೀಡಿದರು. ಬಳಿಕ ಮಾತನಾಡಿದ ಅವರು, ಜನ್ಮ ನೀಡಿದ ತಂದೆ-ತಾಯಿಗಳನ್ನು ಎಂದೂ ಮರೆಯಬಾರದು. ಅವರು ನಮಗೆ ದೇವರು. ಅಲ್ಲದೇ ಮಾತೃಭೂಮಿಯನ್ನು ಎಂದೂ ದೂಷಿಸದೇ, ನಮ್ಮ ಬದುಕನ್ನು ಶ್ರೇಷ್ಠತೆಯತ್ತ ನಾವು ಮುಂದೆ ಸಾಗಬೇಕು ಎಂದರು. ಮಕ್ಕಳ ಜತೆ ಸಂವಹನ ನಡೆಸಿದರು. ರಂಗ ಸಹ್ಯಾದ್ರಿ ಅಧ್ಯಕ್ಷ ಡಿ.ಎನ್. ಗಾಂವ್ಕರ, ಸುಮಂಗಲಾ ಜೋಷಿ, ಪಾರ್ವತಿ ಕಟ್ಟಿಮನಿ ಮತ್ತಿತರರು ಇದ್ದರು.

### ಗೃಹರಕ್ಷಕ ದಳ ತರಬೇತಿ: ರವಿ ರಾಜ್ಯಕ್ಕೆ ಪ್ರಥಮ

**ಹಳಿಯಾಳ:** ರಾಜ್ಯದ ಗೃಹರಕ್ಷಕ ದಳದವರಿಗಾಗಿ



ಆಯೋಜಿಸಿದ ಮೂಲ ಅಗ್ನಿ ಶಮನ ತರಬೇತಿಯಲ್ಲಿ ಉತ್ತರಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ ಹಳಿಯಾಳದ ರವಿ ಅರ್ಜುನ ಮಿರಜಕರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಗೃಹರಕ್ಷಕ ಮತ್ತು ಪೌರರಕ್ಷಣಾ ಅಕಾಡೆಮಿ ಬೆಂಗಳೂರು ಇವರು ಏ.17ರಿಂದ 30ರವರೆಗೆ ಬೆಂಗಳೂರಿನಲ್ಲಿ ಈ ತರಬೇತಿ ಆಯೋಜಿಸಿದ್ದರು. ಅಗ್ನಿ ಶಮನ ವಿಭಾಗದ ತರಬೇತಿಯಲ್ಲಿ ಪ್ರಥಮ ಸ್ಥಾನದಲ್ಲಿ ಯಶಸ್ವಿಯಾದ ರವಿ ಮಿರಜಕರ ಅವರಿಗೆ ಪ್ರಮಾಣ ಪತ್ರ ಹಾಗೂ ಪದಕ ನೀಡಲಾಗಿದೆ.

### ನಿವೃತ್ತ ಮುಖ್ಯಶಿಕ್ಷಕ ವಿ.ಎಂ. ಉಪಾಧ್ಯಾಯ ನಿಧನ



**ಭಟ್ಕಳ:** ತಾಲೂಕಿನ ಕೋಣಾರದ ನಿವೃತ್ತ ಮುಖ್ಯ ಶಿಕ್ಷಕ ವಿ.ಎಂ. ಉಪಾಧ್ಯಾಯ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಇವರು ಮಾರುಕೇರಿಯ ಶಿವಶಾಂತಿಕಾ ಪರಮೇಶ್ವರಿ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಮತ್ತು ಇತಿಹಾಸ ಶಿಕ್ಷಕರಾಗಿ, ನಂತರ ಭಡ್ತಿ ಹೊಂದಿ ಮುಖ್ಯಶಿಕ್ಷಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಆಧ್ಯಾತ್ಮಿಕ ಚಿಂತಕರಾಗಿದ್ದ ಅವರು ಸೇವಾನಿವೃತ್ತಿ ನಂತರ ಪುಸ್ತಕ ಕೂಡ ಬರೆದಿದ್ದರು. ಮೃತರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿ ಅಪಾರ ಬಳಗವಿದೆ.





ಹಳಿಯಾಳ ಪಟ್ಟಣದ ಕೆ.ಎಲ್.ಎಸ್. ಪದವಿ ಕಾಲೇಜಿನಲ್ಲಿ ಆಯೋಜಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನೆಯ ದಿನಾಚರಣೆಗೆ ಕಾಲೇಜು ಪ್ರಾಚಾರ್ಯ ಶ್ರೀನಿವಾಸ ಪ್ರಭು ಚಾಲನೆ ನೀಡಿದರು.



ಶಾಸಕ ಭೀಮಣ್ಣ ನಾಯ್ಕ ಶಿರಸಿ ತಾಲೂಕಿನ ಭೈರುಂಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಂದಾ ಕ್ರಾಸ್ ಬಳಿ ಇರುವ ಕೆಳಗಿನಕೇರಿ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮಸ್ಥರ ಅಹವಾಲು ಆಲಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು ಇದ್ದರು.

## ಗ್ರಾಮಸ್ಥರ ಅಹವಾಲು ಆಲಿಸಿದ ಶಾಸಕ ಭೀಮಣ್ಣ

• **ಕನ್ನಡಪ್ರಭ ವಾರ್ತೆ** ಶಿರಸಿ

ಶಾಸಕ ಭೀಮಣ್ಣ ನಾಯ್ಕ ಭೈರುಂಬೆ ಗ್ರಾಪಂ ವ್ಯಾಪ್ತಿಯ ಸೋಂದಾ ಕ್ರಾಸ್ ಬಳಿ ಇರುವ ಕೆಳಗಿನಕೇರಿ ಗ್ರಾಮಕ್ಕೆ ಭೇಟಿ ನೀಡಿ, ಗ್ರಾಮಸ್ಥರ ಅಹವಾಲು ಆಲಿಸಿದರು.

ಬಳಿಕ ಮಾತನಾಡಿದ ಶಾಸಕರು, ಜನಪ್ರತಿನಿಧಿಗಳು ಕೇವಲ ಚುನಾವಣೆ ಸಮಯದಲ್ಲಿ ಮಾತ್ರವಲ್ಲದೆ, ನಿರಂತರವಾಗಿ ಜನರೊಂದಿಗೆ ಸಂಪರ್ಕದಲ್ಲಿದ್ದಾಗ ಮಾತ್ರ ಕ್ಷೇತ್ರದ ನೈಜ ಅಭಿವೃದ್ಧಿ ಸಾಧ್ಯ ಎಂದರು.

ಅಲ್ಲದೆ ಅವರು ಗ್ರಾಮಸ್ಥರ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿ ಕೆಲವು ತುರ್ತು ಸಮಸ್ಯೆಗಳ ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿಯೇ ಸೂಚಿಸಿದರು.

ಗ್ರಾಮದ ಬೇಡಿಕೆಗಳನ್ನು ಮುಂದಿನ ಅನುದಾನದಲ್ಲಿ ಆದ್ಯತೆಯ ಮೇಲೆ ಈಡೇರಿಸುವ ಭರವಸೆ ನೀಡಿದರು. ಭೈರುಂಬೆ ಪಂಚಾಯಿತಿ ವ್ಯಾಪ್ತಿಯ ಅಭಿವೃದ್ಧಿಗೆ ನಾನು ಬದ್ಧನಾಗಿದ್ದು, ಬಡವರ ಮತ್ತು ರೈತರ ಧ್ವನಿಯಾಗಿ ನಾನು ಸದಾ ಕೆಲಸ ಮಾಡುತ್ತೇನೆ ಎಂದರು. ಈ ಸಂದರ್ಭ ಸ್ಥಳೀಯ ಪಂಚಾಯಿತಿಯ ಮಾಜಿ ಜನಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಕಸಾಪ ಪ್ರತಿಯೊಬ್ಬ ಕನ್ನಡಿಗನ ಅಭಿಮಾನದ ಸಂಸ್ಥೆ

### ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನೆ ದಿನಾಚರಣೆಯಲ್ಲಿ ಸಾಮಾಜಿಕ ಹೋರಾಟಗಾರ ಫಿರೋಜ ಪಿರ್ಜಾದೆ



ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನೆ ದಿನಾಚರಣೆ ಆಚರಣೆ.

• **ಕನ್ನಡಪ್ರಭ ವಾರ್ತೆ** ದಾಂಡೇಲಿ

ಶತಮಾನಗಳ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ನಾಡಿನ ಸಾಹಿತ್ಯಕ, ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡಿದಂತಹ ಒಂದು ಚಾರಿತ್ರಿಕವಾದ ಸಂಘಟನೆಯಾಗಿದೆ. ಇದು ಪ್ರತಿಯೊಬ್ಬ ಕನ್ನಡಿಗನ ಕನ್ನಡ ನಾಡಿನ ಅಭಿಮಾನದ ಸಂಸ್ಥೆಯಾಗಿದೆ ಎಂದು ಸಾಮಾಜಿಕ ಹೋರಾಟಗಾರ ಫಿರೋಜ ಪಿರ್ಜಾದೆ ನುಡಿದರು.

ದಾಂಡೇಲಿಯ ಆಶಾಕಿರಣ ಐಟಿಐ ಕಾಲೇಜಿನಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನೆ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಇಂದು ಅತಿಯಾದ ತಂತ್ರಜ್ಞಾನ ಬಳಕೆಯಿಂದ ಭಾಷೆಗಳ ಮೇಲೆ ಪ್ರಹಾರವಾಗುತ್ತಿದೆ. ವಿದ್ಯಾರ್ಥಿ ಯುವಜನರು ಸಹ ಅತಿಯಾದ ತಂತ್ರಜ್ಞಾನದಲ್ಲಿ ಬದುಕನ್ನ ಮುಳುಗಿಸಿಕೊಂಡಿದ್ದಾರೆ. ಪುಸ್ತಕ ಓದುವ ಸಂಸ್ಕೃತಿ ಕಡಿಮೆಯಾಗುತ್ತಿದೆ. ಇದು ಬಹಳ ಆತಂಕದ ವಿಚಾರ. ನಾವು ಕನ್ನಡ ಪುಸ್ತಕವನ್ನು ಓದುವ ಮೂಲಕ ಕನ್ನಡದ ಸಂಸ್ಕೃತಿಯನ್ನು ಹಾಗೂ ಕನ್ನಡದ ಇತಿಹಾಸವನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕಾಗಿದೆ ಎಂದರು.

ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತಿಯ ಕುರುಹು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದ ಸಾಹಿತಿ ಡಾ. ಭೀಮಾಶಂಕರ ಅಜನಾಳ, ಕನ್ನಡ ಸಾಹಿತ್ಯ ಎನ್ನುವುದು ಇದೊಂದು ಸಾಗರ ಇದ್ದ ಹಾಗೆ. ಇದು ನಾಡಿನ ಇತಿಹಾಸದ ಜೊತೆಗೆ ಇಲ್ಲಿಯ ಜನಪದ ಹಾಗೂ ಇಲ್ಲಿಯ ಮೂಲ ಸಂಸ್ಕೃತಿಯನ್ನು ಉಳಿಸುವ ಮತ್ತು ಕಟ್ಟಿಕೊಡುವ ಕೆಲಸವನ್ನು ಮಾಡಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಮುರ್ತುಜಾ ಹುಸೇನ್ ಆನೆಹೊಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿರುವ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಸ್ಮರಿಸಿ, ವಿದ್ಯಾರ್ಥಿ ಯುವಜನರು ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚುತೊಡಗಿಸಿಕೊಳ್ಳವಂತಾಂಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ಎನ್. ವಾಸರೆ ಮಾತನಾಡಿ, ಈ ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯನ್ನು ಕನ್ನಡದ ಹಬ್ಬ ಎಂದೇ ಆಚರಿಸುವುದು ಸೂಕ್ತ. ಇಂದು ವಿದ್ಯಾರ್ಥಿ ಯುವಜನರು ಓದುವ ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ. ಸಾಮಾನ್ಯ ಜ್ಞಾನಗಳನ್ನು ತಿಳಿದುಕೊಳ್ಳುತ್ತಿಲ್ಲ. ಅತಿಯಾದ ತಂತ್ರಜ್ಞಾನದ ಬಳಕೆ ಮುಂದೆ ಬಹಳಷ್ಟು ಅಪಾಯಕಾರಿಯಾಗಿದೆ. ಕನ್ನಡ ಪ್ರತಿಯೊಬ್ಬರ ಮನೆ, ಮನದಲ್ಲಿ ಅನುರಣಿಸುತ್ತಿರಬೇಕು ಎಂದರು. ಕಸಾಪ ದಾಂಡೇಲಿ ತಾಲೂಕು ಘಟಕದ ಅಧ್ಯಕ್ಷ ನಾರಾಯಣ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಆಶಾಕಿರಣ ಐಟಿಐ ಕಾಲೇಜಿನ ಪ್ರಾಚಾರ್ಯ ಎನ್.ಆರ್. ನಾಯ್ಕ, ಕಸಾಪ ಕಾರ್ಯದರ್ಶಿಗಳಾದ ಗುರುಶಾಂತ ಜಡೆ ಹಿರೇಮಠ, ಪ್ರವೀಣ್ ನಾಯ್ಕ, ಕೋಶಾಧ್ಯಕ್ಷ ಶ್ರೀಮಂತ ಮದರಿ ಮುಂತಾದವರಿದ್ದರು.

ಭಾವ ವೀಣೆ ಮಿಡಿದಾಗ ಎಂಬ ಭಾವಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ರಘುವೀರ್‌ಗೌಡ ಗಿರೀಶ್ ನಾಯ್ಕ, ಮಹಾಂತೇಶ್ ಅಂದಕಾರ, ಸುರೇಶ ಕಾಮತ, ಪೂಜಾ ರೂಗಿ, ಗೌರಿ ಚಟ್ಟರಕಿ ಮುಂತಾದವರು ಭಾವಗೀತೆ ಪ್ರಸ್ತುತಪಡಿಸಿದರು.

ಎನ್.ಆರ್. ನಾಯ್ಕ ಸ್ವಾಗತಿಸಿದರು, ವೆಂಕಮ್ಮ ಗಾಂವಕರ ವಂದಿಸಿದರು. ಗಿರೀಶ ಜೋಶಿ ನಿರೂಪಿಸಿದರು. ಕಲ್ಪನಾ ಪಾಟೀಲ, ಕುಣಾಲ ಘಟಕಾಂಬಳೆ, ಪ್ರವೀಣ ಸುಲಾಖೆ, ಎಸ್.ಎಸ್. ತೆಂಗಿನಮಠ, ಮನೋಜ ನಾಯ್ಕ, ಪಿಂಟೋ, ಸುಚಿತಾ, ಸತೀಶ ನಾಯ್ಕ ಮುಂತಾದವರು ಸಹಕರಿಸಿದರು.



ಯಲ್ಲಾಪುರ ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಪ್ರಾಚಾರ್ಯ ಡಾ. ಆರ್.ಡಿ. ಜನಾರ್ದನ ಉದ್ಘಾಟಿಸಿದರು.

## ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಕಸಾಪ ಕೊಡುಗೆ ಅನನ್ಯ: ಮಾಲತಿ

### ಕಸಾಪದ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಬರಹಗಾರ್ತಿ

• **ಕನ್ನಡಪ್ರಭ ವಾರ್ತೆ** ಸಿದ್ದಾಪುರ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಕನ್ನಡ ಸಾಹಿತ್ಯ ಪರಿಷತ್ ನೀಡಿದ ಕೊಡುಗೆ ಅನನ್ಯವಾದದ್ದು ಎಂದು ಬರಹಗಾರ್ತಿ ಮಾಲತಿ ಭಟ್ಟ ಹೇಳಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪಟ್ಟಣದ ಬಾಲಭವನದಲ್ಲಿ ಹಮ್ಮಿಕೊಂಡ ಕಸಾಪದ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕನ್ನಡ ಮನಸ್ಸುಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಭಾವ ಎನ್ನುವ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಪ್ರತಿವರ್ಷ ಆಯೋಜಿಸುವ ಸಾಹಿತ್ಯ ಸಮ್ಮೇಳನ, ಪುಸ್ತಕ ಪ್ರಕಟಣೆ, ಬರಹಗಾರರಿಗೆ ಪ್ರಶಸ್ತಿ ಮುಂತಾದ ಚಟುವಟಿಕೆಗಳ ಮೂಲಕ ಜನಸಾಮಾನ್ಯರಿಂದ ತೊಡಗಿ, ಸಾಹಿತ್ಯಾಸಕ್ತರಲ್ಲಿ ಆಸಕ್ತಿ ಮೂಡಿಸುವ ಕಾರ್ಯ ಮಾಡುವುದರ ಜೊತೆಗೆ ಕನ್ನಡಿಗರನ್ನು ಒಗ್ಗೂಡಿಸುವ, ಕನ್ನಡಾಭಿಮಾನ ಬೆಳೆಸುವ ಕಾರ್ಯ ಮಾಡುತ್ತ ಬಂದಿದೆ. ಸಾಹಿತ್ಯ ಸೃಷ್ಟಿ ಸಾಮಾಜಿಕ ಹೊಣೆಗಾರಿಕೆಯೂ ಕೂಡ. ವಿದ್ಯಾವಂತರಾದರೆ ಸಾಲದು. ಬುದ್ಧಿಯ ಸಂಸ್ಕಾರವೂ ಅಗತ್ಯ. ಅಂಥ ಕೊಡುಗೆಯನ್ನು ಸದಭಿರುಚಿಯ ಓದು ನೀಡುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳು ಇನ್ನಷ್ಟು ವಿಸ್ತಾರಗೊಳ್ಳಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸಾಹಿತಿ ಸುಬ್ರಾಯ ಮತ್ತಿಹಳ್ಳಿ ಮಾತನಾಡಿ, ಇಂದು ಸಂಕಟ ಮತ್ತು ಸಂಭ್ರಮಗಳ ನಡುವೆ ಕನ್ನಡವಿದೆ. ಕನ್ನಡದ ಉಳಿವಿಗಾಗಿ, ಭಾಷಾ ಸಂಸ್ಕೃತಿಯ ಬೆಳವಣಿಗೆಗಾಗಿ ಜನ್ಮ ತಾಳಿದ ಸಾಹಿತ್ಯ ಪರಿಷತ್ತು ನಿಘಂಟು ಪ್ರಕಟಣೆ ಮುಂತಾದ ಹಲವು ಮಹತ್ತರ ಕಾರ್ಯ ಮಾಡಿದೆ. ಇತ್ತೀಚೆಗೆ ಜನರಿಂದ ದೂರವಾಗಿ, ರಾಜಕಾರಣದ ವೇದಿಕೆಯಾಗುತ್ತಿರುವ ಅಪಾಯ ಕಂಡುಬರುತ್ತಿದೆ. ನಮ್ಮ ಎರಡು ಶಕ್ತಿಗಳಾದ ಅರಿವು ಮತ್ತು ಮರೆವಿನ ಕಾರಣದಿಂದ ಕನ್ನಡ ಯಾವ ಹಂತಕ್ಕೆ ಏರಬೇಕಿತ್ತೋ ಆ ಮಟ್ಟಕ್ಕೆ ಏರಿಲ್ಲ. ಕನ್ನಡ ಸಾಹಿತ್ಯವನ್ನು ಓದುವ ಮೂಲಕ ಎಲ್ಲೆಡೆ ಪಸರಿಸಬೇಕಾದ ಅಗತ್ಯವಿದೆ ಎಂದರು.

ನಿಕಟಪೂರ್ವ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ತಮ್ಮಣ್ಣ ಬೀಗಾರ, ಪ್ರಾಚಾರ್ಯ ಎಂ.ಕೆ. ನಾಯ್ಕ ಹೊಸಳ್ಳಿ ಮಾತನಾಡಿದರು. ತಾಲೂಕು ಕಸಾಪ ಅಧ್ಯಕ್ಷ ಚಂದ್ರಶೇಖರ ನಾಯ್ಕ ಕುಂಬ್ರಿಗದ್ದೆ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಕ್ಲಬ್ ಅಧ್ಯಕ್ಷ ರಾಘವೇಂದ್ರ ಭಟ್ಟ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ವೀರಭದ್ರ ನಾಯ್ಕ, ಕನ್ನಡಪರ ಹೋರಾಟಗಾರ ಶಂಕರಮೂರ್ತಿ ಕತ್ತಿ, ನಿಕಟಪೂರ್ವ ತಾಲೂಕು ಕಸಾಪ ಅಧ್ಯಕ್ಷ ಗೋಪಾಲ ನಾಯ್ಕ ಬಾಶಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಸುಮಿತ್ರಾ ಶೇಟ್, ನೀಲಮ್ಮ ಕೊಂಡ್ಲಿ, ಗೋಪಾಲ ಕಾನಳ್ಳಿ, ಅಸ್ಲಾಂ ಶೇಖ್ ಕನ್ನಡ ಗೀತೆಗಳನ್ನು ಹಾಡಿದರು.

ತಾಲೂಕು ಕಸಾಪ ಪ್ರಧಾನ ಕಾರ್ಯದರ್ಶಿ ಪ್ರಶಾಂತ ಶೇಟ್ ಸ್ವಾಗತಿಸಿದರು. ಖಜಾಂಚಿ ಪಿ.ಬಿ. ಹೊಸೂರ ಪ್ರಾಸ್ತಾವಿಕ ಮಾತನಾಡಿದರು. ಎಂ.ಎನ್. ನಾಯ್ಕ ನಿರೂಪಿಸಿದರು.



ಸಿದ್ದಾಪುರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನಾಚರಣೆಯನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು.

## ಕನ್ನಡ ಭಾಷೆ ಕನ್ನಡಿಗರ ಜೀವನದ ಅವಿಭಾಜ್ಯ ಅಂಗ

• **ಕನ್ನಡಪ್ರಭ ವಾರ್ತೆ** ಹಳಿಯಾಳ

ಕನ್ನಡ ಭಾಷೆಯು 2000 ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸ ಹೊಂದಿರುವ ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದಾಗಿರುವುದು ನಮಗೆಲ್ಲಾ ಹೆಮ್ಮೆಯ, ಅಭಿಮಾನದ ವಿಷಯವಾಗಿದೆ ಎಂದು ಕೆ.ಎಲ್.ಎಸ್. ಪಿಯು ಮತ್ತು ಪದವಿ ಕಾಲೇಜಿನ ಪ್ರಾಚಾರ್ಯ ಶ್ರೀನಿವಾಸ ಪ್ರಭು ಹೇಳಿದರು.

ಮಂಗಳವಾರ ಪಟ್ಟಣದ ಕೆ.ಎಲ್.ಎಸ್. ಪದವಿ ಕಾಲೇಜಿನಲ್ಲಿ ಆಯೋಜಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನೆಯ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕನ್ನಡ ನುಡಿ ಮತ್ತು ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ, ಅದು ಕನ್ನಡಿಗರ ಅಸ್ಮಿತೆ, ಸಂಸ್ಕೃತಿ ಮತ್ತು ಹೆಮ್ಮೆಯಾಗಿದೆ. ಹಳಗನ್ನಡದಿಂದ ನವ್ಯ ಸಾಹಿತ್ಯದವರೆಗೆ, ವಚನ, ತತ್ವಪದ, ದಾಸ ಸಾಹಿತ್ಯದ ಮೂಲಕ ಕನ್ನಡ ಭಾಷೆ ಕನ್ನಡಿಗರ ಜೀವನದ ಅವಿಭಾಜ್ಯ ಅಂಗವಾಗಿ ನಿಂತಿದೆ ಎಂದರು. ಜಾನಪದ ಸಂಶೋಧನಾ ಕೇಂದ್ರದ ಮುಖ್ಯಸ್ಥೆ ವಿಶ್ವೇಶ್ವರಿ ಬಸಲಿಂಗಯ್ಯ ಹಿರೇಮಠ ಮಾತನಾಡಿ, ಕನ್ನಡ ನಮ್ಮ ಜೀವ, ಭಾವ ಸಂವೇದನೆಯ ಭಾಷೆಯಾಗಿದೆ ಎಂದರು.

ವಿಶೇಷ ಉಪನ್ಯಾಸಕ ನೀಡಿದ ವಾಗ್ಮಿ ವಿಠ್ಠಲ ಕೊರ್ವೆಕರ, ಕನ್ನಡದ ಸ್ವಾಯತ್ತ ಸಂಸ್ಥೆ ಕಸಾಪ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಕನ್ನಡಕ್ಕೆ ಸಮಸ್ಯೆ ಎದುರಾದಾಗ ಸಂಘ ಸಂಸ್ಥೆಗಳನ್ನು ಮತ್ತು ಕನ್ನಡಿಗರನ್ನು ಕನ್ನಡ ಸಂರಕ್ಷಣೆಗೆ ಮುಂದಾಗುವಂತೆ ಪ್ರೇರೇಪಿಸಿ ಕನ್ನಡದ ಅಭಿವೃದ್ಧಿಗೆ ಸಹಕರಿಸುತ್ತಿದೆ. ಗಡಿಭಾಗದಲ್ಲಿ ಕನ್ನಡವನ್ನು ಕಟ್ಟುವ ಬೆಳೆಸುವ ಕಾರ್ಯವನ್ನು ಅವಿರತವಾಗಿ ಮಾಡುತ್ತಾ ಕನ್ನಡದ ಭದ್ರಕೋಟೆಯನ್ನು ನಿರ್ಮಿಸಿದೆ ಎಂದರು.

ಇಂದಿನ ಯುವಜನತೆಯು ಕನ್ನಡದ ರಕ್ಷಣೆಗೆ ಹಾಗೂ ಬೆಳವಣಿಗೆಗೆ ಕಂಕಣ ಬದ್ಧರಾಗಬೇಕು ಎಂದು ಕರೆ ಕೊಟ್ಟರು. ತಾಲೂಕು ಕಸಾಪ ಅಧ್ಯಕ್ಷೆ ಸುಮಂಗಲಾ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಹಳಿಯಾಳ ಘಟಕದ ಕಸಾಪ ಕಾರ್ಯದರ್ಶಿ ಶಾಂತಾರಾಮ ಮಾ. ಚಿಬುಲಕರ ಪ್ರಾಸ್ತಾವಿಕವಾಗಿ ಮಾತನಾಡಿ ದರು. ಕಸಾಪ ಕಾರ್ಯದರ್ಶಿ ಬಸವರಾಜ ಇಟಗಿ ಹಾಗೂ ಕಲ್ಪನಾ ಹುದ್ದಾರ ಕಾರ್ಯಕ್ರಮನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಜಾನಪದ ಸಂಶೋಧನಾ ಕೇಂದ್ರ ತಂಡದವರಿಂದ ಕನ್ನಡ ಹಾಡುಗಳ ಗಾಯನ ನಡೆಯಿತು.

ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಹನುಮಂತಿ ಮೋರೆ, ಪೂಜಾ ಪೇಡ್ನೆಕರ ಹಾಗೂ ಸಿಬ್ಬಂದಿಗಳಾದ ಅಲ್ತಾಫ ನರಗುಂದ, ನಾಗೇಂದ್ರ ಖಂಡೇಕರ, ಹರ್ಷದ ಮಿಂಡೋಳ್ಕರ್, ಆದರ್ಶ ಕಲ್ಲೂರ ಹಾಗೂ ವಿದ್ಯಾರ್ಥಿ ವೃಂದ ಉಪಸ್ಥಿತರಿದ್ದರು.

**ನಾಟಕ...** | ವಿಚಾರ ಸಂಕಿರಣ, ನಾಟಕ ಪ್ರದರ್ಶನ ಉದ್ಘಾಟನೆ | ತ್ಯಾಗಲಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘದ ನಿರ್ದೇಶಕ ವಿ.ಎಂ. ಹೆಗಡೆ

## ಆಲೋಚನೆ ಹುಟ್ಟಿಸುವ ಶಕ್ತಿ ನಾಟಕಕ್ಕಿದೆ: ವಿ.ಎಂ. ಹೆಗಡೆ

• **ಕನ್ನಡಪ್ರಭ ವಾರ್ತೆ** ಸಿದ್ದಾಪುರ

ಜಾಗತಿಕವಾಗಿ ವಿಸ್ತರಿಸಿಕೊಂಡ ಕಲಾಪ್ರಕಾರವಾಗಿ ನಾಟಕ ರಂಗಭೂಮಿ ರೂಪುಗೊಂಡಿದೆ. ನಾಟಕಗಳು ನಮ್ಮ ಬದುಕಿನ ಅವಿಭಾಜ್ಯ ಅಂಗ ಎಂದು ನಾಣಿಕಟ್ಟಾದ ತ್ಯಾಗಲಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘದ ನಿರ್ದೇಶಕ ವಿ.ಎಂ. ಹೆಗಡೆ ತ್ಯಾಗಲಿ ಹೇಳಿದರು.

ತ್ಯಾಗಲಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘ ಒಡ್ಡೋಲಗ ಹಿತ್ಲಕ್ಕೈ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಕಾರವಾರ ಇವರ 2025-26ರ ಧನಸಹಾಯ ಯೋಜನೆ ಅಡಿಯಲ್ಲಿ ತ್ಯಾಗಲಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ಜರುಗಿದ ವಿಚಾರ ಸಂಕಿರಣ ಹಾಗೂ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ನಾಟಕಗಳು ಭಿನ್ನವಾದ ಭಾವನೆ, ಆಲೋಚನೆ ಹುಟ್ಟಿಸುವಂಥ ಶಕ್ತಿಯನ್ನು ಪಡೆದಿರುವಂಥವು. ಪ್ರಸ್ತುತ ಸಂದರ್ಭದಲ್ಲಿ ಪುರಾಣಗಳ ಮರು ಅವಲೋಕನ ಮಾಡುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಾಣಿಕಟ್ಟಾದ ಅಗ್ರಗಣ್ಯ ಎಫ್.ಪಿ.ಓ ಅಧ್ಯಕ್ಷ ಸಚ್ಚಿದಾನಂದ ಹೆಗಡೆ ಮಾತನಾಡಿ, ಸಾಂಸ್ಕೃತಿಯತೆ ಸಮಾಜದ ಜೀವಾಳ. ಸಮಾಜದ ಬೆಳವಣಿಗೆಗೆ ಅವು ಹೆಚ್ಚಿನ ಕೊಡುಗೆ ನೀಡುತ್ತವೆ, ನಾಟಕವು ಸದಭಿರುಚಿಯನ್ನು ಮೂಡಿಸಲು ಉತ್ತಮ ವೇದಿಕೆಯಾಗಿದೆ ಎಂದರು.

ಪತ್ರಕರ್ತ, ಸಾಹಿತಿ ಗಂಗಾಧರ ಕೊಳಗಿ ಮಾತನಾಡಿ, ಸಂಪ್ರದಾಯದ ಮುಸುಕಿನಲ್ಲಿ ಹೆಣ್ಣಿನ ಮೇಲೆ ನಡೆಸಿದ ದಬ್ಬಾಳಿಕೆ ಹೇಸಿಗೆ, ಆಕ್ರೋಶ ಹುಟ್ಟಿಸುವಂಥದ್ದು. ಆಧುನಿಕ ಸಾಹಿತ್ಯ ಮಾತ್ರವಲ್ಲ, ಜಾನಪದ ಅಲಿಖಿತ ಹಾಡುಗಳಲ್ಲಿ, ವಚನಗಳಲ್ಲಿ ಹೆಣ್ಣಿನ ಪ್ರತಿಭಟನೆಯ ಸೆಳಕುಗಳನ್ನು ಕಾಣಬಹುದು. ಹೆಣ್ಣನ್ನು ದೇವಿಯಾಗಿ ಕಂಡಂತೆ ದುಷ್ಟ ಶಿಕ್ಷಕಿಯಾಗಿಯೂ ಪುರಾಣಗಳು ಕಂಡಿವೆ. ಹೆಣ್ಣು ಕೇಳುವ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಿದೆ ಎಂದರು.

ಸಮನ್ವಯ ಮಾತುಗಳನ್ನಾಡಿದ ಪ್ರಸಿದ್ಧ ರಂಗ ನಿರ್ದೇಶಕ ಡಾ. ಶ್ರೀಪಾದ ಭಟ್ಟ, ಹೆಣ್ಣು ಕೇಳುತ್ತಿರುವುದು ಸಮಾನತೆಯನ್ನಲ್ಲ. ಸಮಾನ ಅವಕಾಶವನ್ನ. ನನಗೊಂದು ಅಸ್ತಿತ್ವವಿದೆ ಎಂದು ಗುರುತಿಸಿ ಎನ್ನುವುದನ್ನು ಎಂದರು.

ಈ ಸಂದರ್ಭದಲ್ಲಿ ಜರುಗಿದ ಸ್ತ್ರೀ ಎಂದರೆ ಅಷ್ಟೇ ಸಾಕೇ ಎನ್ನುವ ವಿಷಯದ ವಿಚಾರ ಸಂಕಿರಣದಲ್ಲಿ ಸಾಹಿತಿ ಸುಬ್ರಾಯ ಮತ್ತಿಹಳ್ಳಿ, ಪ್ರೌಢಶಾಲಾ ಶಿಕ್ಷಕಿ ಸಂಧ್ಯಾ ಶಾಸ್ತ್ರಿ ಪ್ರಾಚಾರ್ಯ ಎಂ.ಕೆ. ನಾಯ್ಕ ಹೊಸಳ್ಳಿ ವಿಷಯ ಮಂಡಿಸಿದರು.

ಒಡ್ಡೋಲಗ ಸಂಸ್ಥೆಯ ಅಧ್ಯಕ್ಷ, ರಂಗ ನಿರ್ದೇಶಕ ಗಣಪತಿ ಹೆಗಡೆ ಹಿತ್ಲಕ್ಕೈ ಉಪಸ್ಥಿತರಿದ್ದರು. ರಂಗಕಲಾವಿದೆ ಪ್ರಜ್ಞಾ ಹೆಗಡೆ ಹಿತ್ಲಕ್ಕೈ ಸ್ವಾಗತಿಸಿ, ವಂದಿಸಿದರು.

ನಂತರ ಶಿರಸಿಯ ಆದರ್ಶ ವನಿತಾ ಸಮಾಜದ ಸದಸ್ಯೆಯರಿಂದ ಎಚ್.ಎಸ್. ವೆಂಕಟೇಶಮೂರ್ತಿ ರಚಿಸಿ, ಡಾ.ಶ್ರೀಪಾದ ಭಟ್ಟ ನಿರ್ದೇಶಿಸಿದ ನಿನಗೆ ನೀನೇ ಗೆಳತಿ ನಾಟಕ ಪ್ರದರ್ಶನಗೊಂಡಿತು.



ಸಿದ್ದಾಪುರ ತಾಲೂಕಿನ ನಾಣಿಕಟ್ಟಾದಲ್ಲಿ ವಿಚಾರ ಸಂಕಿರಣ ಜರುಗಿತು.

- ನಾಟಕಗಳು ಭಿನ್ನವಾದ ಭಾವನೆ, ಆಲೋಚನೆ ಹುಟ್ಟಿಸುವಂಥ ಶಕ್ತಿಯನ್ನು ಪಡೆದಿರುವಂಥವು.
- ಪ್ರಸ್ತುತ ಸಂದರ್ಭದಲ್ಲಿ ಪುರಾಣಗಳ ಮರು ಅವಲೋಕನ ಮಾಡುತ್ತವೆ

## ಮನುಷ್ಯತ್ವ ಬೆಳೆಸಿಕೊಳ್ಳೋಣ

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ಹಣದ ಹಿಂದೆ ಬೆನ್ನು ಹತ್ತಿದ ಯಾಂತ್ರಿಕ ಜೀವನದ ಸಂದರ್ಭದಲ್ಲಿ ಸಾಹಿತ್ಯ ಪ್ರೀತಿ, ಆಸಕ್ತಿ ಕ್ಷೀಣಿಸುತ್ತಿದೆ. ಭೌತಿಕ ಸಂಪತ್ತು ಹೆಚ್ಚಿಸಬೇಕೆಂಬ ಹಂಬಲದ ನಡುವೆ ಭಾವನಾತ್ಮಕವಾಗಿ ಬೆಳೆಯುವ, ಬೆಳೆಸುವ ಪ್ರವೃತ್ತಿ ಹೆಚ್ಚಬೇಕು. ಕನ್ನಡ ನಾಡು, ನುಡಿಯ ಬಗ್ಗೆ ಅಭಿಮಾನ ಹೆಚ್ಚಬೇಕು ಎಂದು ಕಾಲೇಜಿನ ಪ್ರಾಚಾರ್ಯ ಡಾ. ಆರ್.ಡಿ. ಜನಾರ್ದನ ಹೇಳಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಲಘಟಗಿ ಕಾಲೇಜಿನ ಪ್ರಾಧ್ಯಾಪಕ ಪಿ.ಬಿ. ಚಾರಿ ಉಪನ್ಯಾಸ ನೀಡಿ, ಸತ್ಯ ಮತ್ತು ಅಸತ್ಯದ ನಡುವೆ ಇರುವ ಭ್ರಮೆಯನ್ನು ಕಳಚಿಹಾಕಿ ಸತ್ಯದ ದರ್ಶನ ಮಾಡುವ ಕೆಲಸ ಸಾಹಿತ್ಯ ಮಾಡುತ್ತ ಬಂದಿದೆ. ಕನ್ನಡವನ್ನು ಬೆಳೆಸುವ, ಉಳಿಸುವ ಕೆಲಸ ಸಾಹಿತ್ಯ ಪರಿಷತ್ತು ಮಾಡುತ್ತ ಬಂದಿದೆ. ಪುರಾಣ ಸಾಹಿತ್ಯಗಳು ಮೌಲಿಕ ಪ್ರಾತಿನಿಧಿಕ ಕನ್ನಡದ ಆಕರಗಳಾಗಿವೆ. ಧರ್ಮ, ಜಾತಿ ಮೀರಿ ಮನುಷ್ಯತ್ವವನ್ನು ಬೆಳೆಸಿಕೊಳ್ಳಬೇಕು ಎಂದರು.

ವೈಟಿಎಸ್‌ಎಸ್ ಪ್ರಾಂಶುಪಾಲ ಆನಂದ ಹೆಗಡೆ, ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ ಭಾಗವಹಿಸಿದ್ದರು.

ಕಸಾಪ ತಾಲೂಕಾ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ಟ ಅಧ್ಯಕ್ಷತೆ ವಹಿಸಿ, ಮಾತೃಭಾಷೆ ಕನ್ನಡದ ಬಗ್ಗೆ ಹೆಚ್ಚಿನ ಆಸ್ತೆ ವಹಿಸಬೇಕು. ವಿದ್ಯಾರ್ಥಿಗಳು ಭಾಷೆಯ ಮೇಲೆ ಪ್ರಭುತ್ವ ಹೊಂದಬೇಕು ಎಂದರು.

ಪ್ರಾಧ್ಯಾಪಕ ಡಾ. ರವಿ ಶೇಷಗಿರಿ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ನಟಾಲಿಯ ನಿರೂಪಿಸಿದರು. ವೈಷ್ಣವಿ ದೇವಾಡಿಗ ವಂದಿಸಿದರು.

ಸ್ವ-ಸಹಾಯ ಸಂಘಗಳು ಸ್ವ ಉದ್ಯೋಗ ಮಾಡುವ ಮೂಲಕ ಸ್ವಾವಲಂಬಿ ಸ್ಥಾಪಿಸುವಲ್ಲಿ ಇಂತಹ ಯೋಜನೆಗಳು ಸಹಾಯಕವಾಗಿದೆ. ಕೌಶಲ್ಯಾಭಿ ವೃದ್ಧಿಗೆ ಒತ್ತು ಕೊಡಲಾಗುತ್ತಿದೆ. ಆದ್ದರಿಂದ ಮುಂಬರುವ ಒಂದೂವರೆ ತಿಂಗಳಿನಲ್ಲಿ ಈ ಕಟ್ಟಡ ಪೂರ್ತಿಗೊಳಿಸಿ ಅಕ್ಕ ಕೆಫೆ ಉದ್ಘಾಟನೆಯಾಗಬೇಕು.
• **ಶಿವರಾಮ ಹೆಬ್ಬಾರ** ಶಾಸಕ



## ಸುದ್ದಿ ಸಿಂಚನ

### ಹ್ಯಾಕಥಾನ್ ಸ್ಪರ್ಧೆ: ವಿಡಿಐಟಿ ಎಂಜಿನಿಯರಿಂಗ್ ಕಾಲೇಜು ಪ್ರಥಮ

**ಹಳಿಯಾಳ:** ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿಡಿಐಟಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಹ್ಯಾಕಥಾನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಇತ್ತೀಚೆಗೆ ಧಾರವಾಡದ ಎಸ್.ಡಿ.ಎಂ ತಾಂತ್ರಿಕ ಮಹಾವಿದ್ಯಾಲಯವು ಇನ್ಸಿಗ್ನೇಯಾ ಹ್ಯಾಕಥಾನ್ ಸ್ಪರ್ಧೆಯನ್ನು ಆಯೋಜಿಸಿತ್ತು. ಈ ಸ್ಪರ್ಧೆಯಲ್ಲಿ ಕಂಪ್ಯೂಟರ್‌ಸೈನ್ಸ್ ವಿಭಾಗದ ಅಭಿಲಾಷ್ ಕುಲಕರ್ಣಿ, ಸೃಷ್ಟಿ ಕುಲಕರ್ಣಿ, ಸೌಮ್ಯ ಪೂಜಾರಿ, ತನು ಗೊಂಡಿ ಕಾಲೇಜು ಬಸ್‌ಗಳ ನಿರ್ವಹಣೆ ಹಾಗೂ ಸಾರಿಗೆ ದಕ್ಷತೆ ಕುರಿತಾಗಿ ನೀಡಿದ ಸಲಹೆ ಮತ್ತು ಅಭಿವೃದ್ಧಿ ಪಡಿಸಿದ ತಂತ್ರಾಂಶ ಪರಿಗಣಿಸಿ ಪ್ರಥಮ ಸ್ಥಾನ ನೀಡಿ ಪುರಸ್ಕರಿಸಲಾಯಿತು.



# ಹಾವೇರಿ-ಶಿರಸಿ ರಸ್ತೆ ದುರಸ್ತಿಗೆ ಆಗ್ರಹ

## ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಸಾರ್ವಜನಿಕರ ಪ್ರತಿಭಟನೆ, ಆಕ್ರೋಶ | ಅಣುಕು ಶವ ಪ್ರದರ್ಶನ




ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಶಿರಸಿ

ಹಾವೇರಿ-ಶಿರಸಿ ರಸ್ತೆ ದುರಸ್ತಿಗೆ ಆಗ್ರಹಿಸಿ ಸಾರ್ವಜನಿಕರು ತಾಲೂಕಿನ ಬಿಸಿಲಕೊಪ್ಪದ ಬಳಿ ಹಾವೇರಿ- ಶಿರಸಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮುಖಂಡ ಸುನಿಲ್ ನಾಯ್ಕ್ ನೇತೃತ್ವದಲ್ಲಿ ಸುಮಾರು 2-3 ಗಂಟೆಗಳ ಕಾಲ ರಸ್ತೆ ತಡೆ ನಡೆಸಿ, ಅಣುಕು ಶವ ಪ್ರದರ್ಶನ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ವಿರುದ್ಧ ಘೋಷಣೆಗಳನ್ನು ಕೂಗಿ ರಸ್ತೆ ತಡೆ ನಡೆಸಿ ಸ್ಥಳಕ್ಕೆ ಜಿಲ್ಲಾಧಿಕಾರಿ ಬರುವಂತೆ ಪಟ್ಟು ಹಿಡಿದರು. ಸುದ್ದಿ ತಿಳಿದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಜನರ ಮನವೊಲಿಸುವ ಪ್ರಯತ್ನ ಮಾಡಿದರು. ಆ ಸಂದರ್ಭದಲ್ಲಿ ಸಾರ್ವಜನಿಕರು ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ನಂತರ ಸುನಿಲ್ ನಾಯಕ್ ಮಾತನಾಡಿ, ಅವಧಿ ಮುಗಿದರೂ ಇದುವರೆಗೂ ಸರಿಯಾಗಿ ರಸ್ತೆ ನಿರ್ಮಾಣ ಮಾಡಿಲ್ಲ. ಇದರಿಂದ ವಾಹನ ಸವಾರರು ದಿನನಿತ್ಯ ಜೀವ ಭಯದಲಿಯೇ ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ಈಗಾಗಲೇ ಅನೇಕರಿಗೆ ಗಂಭೀರ ಗಾಯಗಳಾಗಿವೆ. ಇದಕ್ಕೆ ಹೊಣೆ ಯಾರು ಎಂದು ಪ್ರಶ್ನಿಸಿದರು. ನಂತರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮೇ ಅಂತ್ಯದೊಳಗಾಗಿ ರಸ್ತೆಯನ್ನು ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭ ನೂರಾರು ಜನರು ಪಾಲ್ಗೊಂಡಿದ್ದರು. ಕೆಲಕಾಲ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿದ್ದರಿಂದ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿತ್ತು.

### ಭಾರೀ ವಾಹನಗಳಿಗೆ ತಾತ್ಕಾಲಿಕ ನಿಷೇಧ

**ಶಿರಸಿ:** ಮೇ 7ರ ವರೆಗೆ ಶಿರಸಿ ಬಿಸಿಲಕೊಪ್ಪ ಮಾರ್ಗದಲ್ಲಿ ಭಾರೀ ವಾಹನಗಳ ಸಂಚಾರ ಸಂಪೂರ್ಣವಾಗಿ ನಿಷೇಧ ಮಾಡಲಾಗಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಮಂಗಳವಾರ ಸಾರ್ವಜನಿಕರು, ರೈತ ಸಂಘಟನೆಯವರು ಸೇರಿ ನಡೆಸಿದ ಪ್ರತಿಭಟನೆಯಲ್ಲಿ ಸಾರ್ವಜನಿಕರ ಅಹವಾಲು ಕೇಳಿದ ಸಹಾಯಕ ಆಯುಕ್ತರು, ತಾಲೂಕು ದಂಡಾಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಶಿರಸಿ-ಬಿಸಿಲುಕೊಪ್ಪ ಮಾರ್ಗದಲ್ಲಿ ಯಾವುದೇ ಭಾರಿ ಗಾತ್ರದ ವಾಹನಗಳಿಗೆ, ಲಾರಿ ಟಿಪ್ಪರ್‌ಗಳಿಗೆ ಸರ್ಕಾರಿ ಮತ್ತು ಖಾಸಗಿ ಬಸ್‌ಗಳಿಗೆ, ಪ್ರವಾಸಿಗರ ಟೆಂಪೋ ಟ್ರಾವೆಲ್ಲರ್‌ಗಳಿಗೆ ಸಂಚಾರವನ್ನು ಮೇ 7ವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕಾರಣ ಭಾರಿ ವಾಹನಗಳಾದ ಬಸ್, ಟಿಪ್ಪರ್, ಟೆಂಪೋ ಟ್ರಾವೆಲರ್, ಖಾಸಗಿ ವಾಹನಗಳಿಗೆ ಶಿರಸಿ-ಬಿಸಲ್ಕೊಪ್ಪ ಮಾರ್ಗ ಬಿಟ್ಟು ಹುಬ್ಬಳ್ಳಿ ಕಡೆಯಿಂ ದ ಬರುವ ವಾಹನಗಳು ಮಳಗಿ-ದಾಸನ ಕೊಪ್ಪ-ಬನವಾಸಿ-ಶಿರಸಿ ಹಾಗೂ ಹಾವೇರಿ ಕಡೆಯಿಂದ ಬರುವ ವಾಹನಗಳು ದಾಸನಕೊಪ್ಪ- ಬನವಾಸಿ-ಶಿರಸಿ ಮಾರ್ಗದಲ್ಲಿ ಸಂಚರಿಸಬೇಕು.

# ಇಂದು ಬೆಳಕೆ ಗ್ರಾಮೀಣ ವ್ಯವಸಾಯ ಸಂಘದ 4ನೇ ಶಾಖೆ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಭಟ್ಕಳ



ತಾಲೂಕಿನ ಬೆಳಕೆಯ ಗ್ರಾಮೀಣ ವ್ಯವಸಾಯ ಸಂಘದ 4ನೇ ಶಾಖೆ ಮುರುಡೇಶ್ವರದ ಬಸ್ ನಿಲ್ದಾಣದ ಎದುರಿನ ಸ್ನೇಹಲ್ ಬಿಲ್ಡಿಂಗ್‌ನಲ್ಲಿ ಮೇ 6ರ ಬೆಳಗ್ಗೆ ಗಣಹೋಮದೊಂದಿಗೆ ಉದ್ಘಾಟನೆಗೊಳ್ಳಲಿದೆ.

ಬೆಳಕೆ ಗ್ರಾಮೀಣ ವ್ಯವಸಾಯ ಸಂಘ ತಾಲೂಕಿನಪ್ರತಿಷ್ಠಿತಸಹಕಾರಿಸಂಘಗಳಲ್ಲೊಂದಾಗಿದ್ದು ವರ್ಷದಿಂದ ವರ್ಷಕ್ಕೆ ಉತ್ತಮ ಅಭಿವೃದ್ಧಿ ಹೊಂದುತ್ತಿದೆ. ಸಂಘ ಪ್ರಧಾನ ಕಚೇರಿಯಲ್ಲಿ ಮುಖ್ಯಶಾಖೆ ಹೊಂದಿದ್ದು, ಸರ್ಪನಕಟ್ಟೆ, ಶಿರೂರಿನಲ್ಲೂ ಶಾಖೆ ಹೊಂದಿದೆ. ಇದೀಗ ತನ್ನ ವ್ಯವಹಾರ ವಿಸ್ತರಿಸಿ ಮುರುಡೇಶ್ವರದಲ್ಲಿ ಶಾಖೆ ಆರಂಭಿ ಸುತ್ತಿದೆ. ಮುರುಡೇಶ್ವರ ಶಾಖೆಯಲ್ಲಿ ಸುಸಜ್ಜಿತ ವ್ಯವಸ್ಥೆ ಅಳವಡಿಸಲಾಗಿದೆ. ಬೆಳಕೆ ಗ್ರಾಮೀಣ ವ್ಯವಸಾಯ ಸಹಕಾರಿ ಸಂಘ 8677 ಶೇರುದಾರ ಸದಸ್ಯರನ್ನು ಹೊಂದಿದೆ. ಸಂಘ ₹659.12 ಲಕ್ಷ ಶೇರು ಬಂಡವಾಳ, ₹1368.34 ಲಕ್ಷ ನಿಧಿಗಳು, ₹9151.47 ಲಕ್ಷ ಠೇವಣಿ, ₹1403.15 ಲಕ್ಷ ಹೂಡಿಕೆ, ₹10992.98 ಲಕ್ಷ ಹೊರಬಾಕಿ ಸಾಲ ಹೊಂದಿದೆ. ಸಂಘ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರವನ್ನೂ ಕೂಡ ನೀಡಿ ಗ್ರಾಹಕರ ವಿಶ್ವಾಸಗಳಿಸಿದೆ. ಸಂಘ ಆರ್ಥಿಕ ವ್ಯವಹಾರದ ಜತೆಗೆ ಸಮಾಜಮುಖಿಯಾಗಿಯೂ ಸ್ಪಂದಿಸುತ್ತಿದೆ. ಬೆಳಕೆಯಲ್ಲಿ ಜನರ ಅನುಕೂಲಕ್ಕಾಗಿ ಬಸ್ ನಿಲ್ದಾಣ, ಮುಖ್ಯ ಕಚೇರಿಯಲ್ಲಿ ಇ-ಸ್ಟಾಂಪಿಂಗ್ ವ್ಯವಸ್ಥೆ, ಸಂಘದ ಕಾರ್ಯ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚಿನ ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ, ಅನಾರೋಗ್ಯ ಪೀಡಿತರಿಗೆ ನೆರವು ಸೇರಿ ಹಲವು ಕಾರ್ಯಗಳನ್ನು ಮಾಡುತ್ತಿದೆ.

ಮುರುಡೇಶ್ವರದಲ್ಲಿ ಸಂಘದ ನೂತನ ಶಾಖೆ ಮಾಡಬೇಕೆಂಬ ಬೇಡಿಕೆ ಬಂದ ಹಿನ್ನೆಲೆ ಜನರ ಅನುಕೂಲಕ್ಕಾಗಿ ತನ್ನ ಶಾಖೆ ಆರಂಭ ಮಾಡುತ್ತಿದ್ದು, ಇದರ ಸದುಪಯೋಗ ಪಡೆಯಬೇಕು. ಮುಂದಿನ ದಿನಗಳಲ್ಲಿ ಸಂಘದಿಂದ ಮತ್ತೆ 2 ಶಾಖೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಗ್ರಾಹಕರ ಉತ್ತಮ ವ್ಯವಹಾರದಿಂದ ಸಂಘ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಲಾಭಗಳಿಸಲು ಕಾರಣವಾಗಿದ್ದು, ಇದೀಗ ಮುರುಡೇಶ್ವರ ಶಾಖೆಯಲ್ಲೂ ಸಹ ಈ ಭಾಗದ ಜನರು ವ್ಯವಹಾರ ಮಾಡುವುದರ ಮೂಲಕ ಸಂಘದ ಅಭಿವೃದ್ಧಿ ಸಹಕಾರ ನೀಡಬೇಕು ಎಂದು ಸಂಘದ ಅಧ್ಯಕ್ಷ ಮಾದೇವ ನಾಯ್ಕ, ಉಪಾಧ್ಯಕ್ಷ ಪಾಂಡು ಜಿ. ನಾಯ್ಕ ಹಾಗೂ ಪ್ರಧಾನ ವ್ಯವಸ್ಥಾಪಕ ಅಣ್ಣಪ್ಪ ನಾಯ್ಕ ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಅಂಗಾರಕ ಸಂಕಷ್ಟಿ: ದೇವಾಲಯಗಳಲ್ಲಿ ವಿಶೇಷ ಪೂಜೆ

• **ಕನ್ನಡಪ್ರಭ ವಾರ್ತೆ** ಗೋಕರ್ಣ

ಪುರಾಣ ಪ್ರಸಿದ್ಧ ಕ್ಷೇತ್ರ ಅಂಗಾರಕ ಸಂಕಷ್ಟಿ ದಿನವಾದ ಮಂಗಳವಾರ ಇಲ್ಲಿನ ವಿವಿಧ ಗಣೇಶನ ಮಂದಿರದಲ್ಲಿ ವಿಶೇಷ ಪೂಜೆ, ವಿವಿಧ ದೈವಿಕ ಕಾರ್ಯಗಳು ನಡೆಯಿತು.-

ಇಲ್ಲಿನ ಮಹಾಗಣಪತಿ ಮಂದಿರದಲ್ಲಿ ಮುಂಜಾನೆಯಿಂದಲೇ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವರ ದರ್ಶನ, ಪೂಜೆ ನೆರವೇರಿಸಿದರು. ಈ ವರ್ಷದ ಮೊದಲ ಅಂಗಾರಕ ಸಂಕಷ್ಟಿ ಇದಾಗಿದ್ದು ಭಕ್ತರು ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ ಸೇರಿದಂತೆ ವಿವಿಧ ಪೂಜೆ ನೆರವೇರಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು.



ಇದರಂತೆ ಕೋಟಿತೀರ್ಥ ಕಟ್ಟೆಯಲ್ಲಿರುವ ಪಟ್ಟೆ ವಿನಾಯಕ, ತಾರಮಕ್ಕಿಯಲ್ಲಿರುವ ಕೇತಕಿ ವಿನಾಯಕ ಮಂದಿರ, ರಥ ಬೀದಿಯಲ್ಲಿರುವ ವನವಿನಾಯಕ ಮಂದಿರಗಳಲ್ಲಿ ಭಕ್ತರು ದೇವರ ದರ್ಶನ ಪೂಜೆ ಕೈಗೊಂಡರು.

ಇದರಂತೆ ಹಾರೂಮಾಸ್ಕೇರಿಯಲ್ಲಿರುವ ಗಣಪತಿ ದೇವಾಲಯ, ಗಂಗಾವಳಿ, ತದಡಿ, ತೊರ್ಕೆ, ಮಾದನಗೇರಿ, ಹಿರೇಗುತ್ತಿ ಭಾಗದ ಗಣಪತಿ ದೇವಾಲಯಗಳಲ್ಲಿ ಸಹ ವಿಶೇಷ ಪೂಜೆ ನೆರವೇರಿತು.

# ಅಕ್ಕ ಕೆಫೆ ನಿರ್ಮಾಣ ಕಾಮಗಾರಿಗೆ ಹೆಬ್ಬಾರ ಶಂಕುಸ್ಥಾಪನೆ

• **ಕನ್ನಡಪ್ರಭ ವಾರ್ತೆ** ಯಲ್ಲಾಪುರ

ರಾಜ್ಯದ ಮಹತ್ವಾಕಾಂಕ್ಷಿ ಯೋಜನೆ 'ಅಕ್ಕ ಕೆಫೆ' ಇದು ಹಳ್ಳಿಯಿಂದ ಬಂದ ಬಡವರಿಗಾಗಿ ಉತ್ತಮ ಗುಣಮಟ್ಟದ ಊಟೋಪಚಾರ ವ್ಯವಸ್ಥೆಯನ್ನು ಸ್ವ-ಸಹಾಯ ಸಂಘದ ಉದ್ಯೋಗ ಸೃಷ್ಟಿಗಾಗಿ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಮಂಗಳವಾರ ತಾಪಂ ಆವಾರದ ಇಂದಿರಾ ಕ್ಯಾಂಟೀನ್ ಬಳಿ ಜಿಲ್ಲಾಡಳಿತ, ಜಿಪಂ ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ತಾಲೂಕಿನಲ್ಲಿ ಅಕ್ಕ ಕೆಫೆ (ಪ್ರೀಮಿಯಂ ಮಾದರಿಯಲ್ಲಿ) ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ, ಮಾತನಾಡಿದರು.

ಸ್ವ-ಸಹಾಯ ಸಂಘಗಳು ಸ್ವ ಉದ್ಯೋಗ ಮಾಡುವ ಮೂಲಕ ಸ್ವಾವಲಂಬಿ ಸ್ಥಾಪಿಸುವಲ್ಲಿ ಇಂತಹ ಯೋಜನೆಗಳು ಸಹಾಯಕವಾಗಿದೆ. ಕೌಶಲ್ಯಾಭಿ ವೃದ್ಧಿಗೆ ಒತ್ತು ಕೊಡಲಾಗುತ್ತಿದೆ. ಆದ್ದರಿಂದ ಮುಂಬರುವ ಒಂದೂವರೆ ತಿಂಗಳಿನಲ್ಲಿ ಈ ಕಟ್ಟಡ ಪೂರ್ತಿಗೊಳಿಸಿ ಅಕ್ಕ ಕೆಫೆ ಉದ್ಘಾಟನೆಯಾಗಬೇಕು ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರು.

ಈ ಸಂದರ್ಭ ತಾಪಂ ಇಒ ರಾಜೇಶ ಧನವಾಡಕರ, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಉಲ್ಲಾಸ ಶಾನಭಾಗ, ಸಾಮಾಜಿಕ ಕಾರ್ಯಕರ್ತರಾದ ವಿಜಯ ಮಿರಾಶಿ, ವಿ.ಎಸ್. ಭಟ್ಟ, ಸಂಜೀವಿನ ಒಕ್ಕೂಟದ ಜಗದೀಶ ನಾಯಕ, ನಿರ್ಮಿತಿ ಕೇಂದ್ರದ ಗುತ್ತಿಗೆದಾರ ಗುರುಪ್ರಸಾದ ಅಂಕೋಲೆಕರ ಇದ್ದರು.



ಸಂಜೀವಿನಿ ತಾಲೂಕಾ ಕಾರ್ಯಕ್ರಮ ವ್ಯವಸ್ಥಾಪಕ ಮಂಜಣ್ಣ ಬಿ. ಸ್ವಾಗತಿಸಿದರು. ರಾಜಾರಾಮ ವೈದ್ಯ ವಂದಿಸಿದರು.

# ಕೃಷಿ ಭೂಮಿಗೆ ನೀರು ಪೂರೈಕೆಗೆ ಆಗ್ರಹಿಸಿ ಧರಣಿ

• **ಕನ್ನಡಪ್ರಭ ವಾರ್ತೆ** ಮುಂಡಗೋಡ

ತಾಲೂಕಿನ ನ್ಯಾಸರ್ಗಿ ಜಲಾಶಯದ ಗೇಟ್ ದುರಸ್ತಿಗೊಳಿಸಿ ಬಾಚಣಕಿ ಭಾಗದ ಕೃಷಿ ಭೂಮಿಗೆ ನೀರು ಪೂರೈಸುವಂತೆ ಆಗ್ರಹಿಸಿ ಬಾಚಣಕಿ ಭಾಗದ ರೈತರು ಮಂಗಳವಾರ ಇಲ್ಲಿಯ ಚಿಕ್ಕ ನೀರಾವರಿ ಇಲಾಖೆ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

40 ವರ್ಷಗಳ ಹಿಂದೆ ನ್ಯಾಸರ್ಗಿ ಮತ್ತು ಬಾಚಣಕಿ ಭಾಗದ ರೈತರ ಗದ್ದೆಗಳಿಗೆ ನೀರು ಪೂರೈಸುವ ಉದ್ದೇಶದಿಂದ ಈ ಜಲಾಶಯ ನಿರ್ಮಾಣ ಮಾಡಲಾಗಿದೆ. ಆದರೆ ಈವರೆಗೂ ಬಾಚಣಕಿ ಭಾಗದ ಕೃಷಿ ಭೂಮಿಗೆ ನೀರು ಪೂರೈಸಲಾಗಿಲ್ಲ. ಇದರಿಂದ ರೈತರ ಬೆಳೆಗೆ ಸಮರ್ಪಕ ನೀರು ಸಿಗದೆ ತೊಂದರೆಯಾಗುತ್ತಿದೆ. ಈ ಬಗ್ಗೆ ಹಲವು ಬಾರಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದ ರೈತರು, ನೀರು ಪೂರೈಕೆ ವ್ಯವಸ್ಥೆ ಮಾಡುವವರೆಗೆ ಧರಣಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಪಟ್ಟುಹಿಡಿದರು.



ಬಾಚಣಕಿ ಭಾಗದ ರೈತರು ಚಿಕ್ಕ ನೀರಾವರಿ ಇಲಾಖೆ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಜಲಾಶಯದ ದುರಸ್ತಿ ಕಾರ್ಯಕ್ಕೆ ಅನುದಾನದ ಕೊರತೆ ಇದ್ದು, ಅನುದಾನಕ್ಕಾಗಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸದ್ಯಕ್ಕೆ ಜೆಸಿಬಿ ಮೂಲಕ ಸಣ್ಣ ಪುಟ್ಟ ಕಾಲುವೆ ದುರಸ್ತಿ ಮಾಡಿ ನೀರು ಹರಿಸುವ ವ್ಯವಸ್ಥೆ ಮಾಡಿಕೊಡುವುದಾಗಿ ಚಿಕ್ಕ ನೀರಾವರಿ ಇಲಾಖೆ ಅಧಿಕಾರಿ ಆರ್.ಎನ್. ನಾಯ್ಕ ಭರವಸೆ ನೀಡಿದ್ದಾರೆ.




# ದಾಂಡೇಲಿಯಲ್ಲಿ ಕಾಂಗ್ರೆಸ್ ವಿಜಯೋತ್ಸವ

• **ಕನ್ನಡಪ್ರಭ ವಾರ್ತೆ** ದಾಂಡೇಲಿ

ರಾಜ್ಯದ ಉಪ ಚುನಾವಣೆ ಹಾಗೂ ಕೇರಳದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದ ಹಿನ್ನೆಲೆ ನಗರದ ಸೋಮಾನಿ ವೃತ್ತದಲ್ಲಿ ಮಂಗಳವಾರ ಕೈ ಕಾರ್ಯಕರ್ತರು ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಿದರು.


ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ಪ್ರಧಾನ ಕಾರ್ಯದರ್ಶಿ ಕೀರ್ತಿ ಗಾಂವಕರ, ನಗರಸಭೆಯ ಮಾಜಿ ಅಧ್ಯಕ್ಷ ಅಷ್ಫಾಕ್ ಶೇಖ, ಪಂಚ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರಿಯಾಜ್ ಸಯ್ಯದ, ಮಹಿಳಾ ಘಟಕ ಅಧ್ಯಕ್ಷೆ ರೇಣುಕಾ ಬಂದಮ್, ಯಾಸ್ಮಿನ ಕಿತ್ತೂರ, ಉಸ್ಮಾನ ಮುನ್ನಾ ವಹಾಬ, ಆಸಿಫ್‌ಅಲಿ ಮುಲ್ಲಾ, ಆಫ್ರಿನ್ ಕಿತ್ತೂರ, ದಿವಾಕರ ನಾಯ್ಕ, ಅನಿಲ ದಂಡಗಲ, ರವಿಕುಮಾರ ಚವ್ಹಾಣ, ಪ್ರತಾಪಸಿಂಗ ರಜಪುತ, ಎಲ್ಲ ಸೆಲ್‌ಗಳ ಅಧ್ಯಕ್ಷ, ಪಕ್ಷದ ಪದಾಧಿಕಾರಿಗಳು, ಸದಸ್ಯರು ಇದ್ದರು.



## ನಾಳೆ ಸಂಗೀತ ಕಾರ್ಯಕ್ರಮ

**ಶಿರಸಿ:** ನಗರದ ನೆಮ್ಮದಿ ಕುಟೀರದಲ್ಲಿ ಸ್ವರ ಲಯ ಸಂಗೀತ ಬೈಠಕ್ ಕಾರ್ಯಕ್ರಮವನ್ನು ಮೇ 7ರಂದು ಸಂಜೆ 5.30ರಿಂದ ಏರ್ಪಡಿಸಲಾಗಿದೆ. ಗೌತಮ್ ಹೆಗಡೆ ಮತ್ತು ವಿಜೇತಾ ಹೆಗಡೆ ಗಾಯನ ಹಾಗೂ ರಾಮಕೃಷ್ಣ ಹೆಗಡೆ ಸಿತಾರ್ ಕಾರ್ಯಕ್ರಮ ನೀಡುವರು. ಇವರಿಗೆ ಸಹಕಲಾವಿದರಾಗಿ ರಾಮದಾಸ್ ಭಟ್, ಸಂದೇಶ ಹೆಗಡೆ ಹಾಗೂ ರಚಿತ್ ಹೆಗಡೆ, ಪ್ರಜ್ವಲ್ ಹೆಗಡೆ, ಉನ್ನತಿ ಕಾಮತ್ ಸಹಕಾರ ನೀಡುವರು ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





# ದೈಹಿಕ ಕ್ರಿಯಾಶೀಲತೆಗೆ ಈಜು ಬಹಳ ಮುಖ್ಯ

• **ಕನ್ನಡಪ್ರಭ ವಾರ್ತೆ** ಶಿರಸಿ

ನಗರದ ಶ್ರೀ ಮಾರಿಕಾಂಬಾ ಜಿಲ್ಲಾ ಕ್ರೀಡಾಂಗಣದಲ್ಲಿರುವ ನಗರಸಭೆಯ ಈಜು ಕೊಳದಲ್ಲಿ 5ರಿಂದ 60 ವರ್ಷ ಮೇಲ್ಪಟ್ಟ ಪುರುಷರು ಮತ್ತು ಮಹಿಳೆಯರಿಗಾಗಿ ರೋಟರಿ ಕ್ಲಬ್ ವತಿಯಿಂದ ತಾಲೂಕು ಮಟ್ಟದ ಈಜು ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸಹಾಯಕಆಯುಕ್ತ ಚಂದ್ರಶೇಖರ ಆರ್.ಜಿ. ಮಾತನಾಡಿ, ಅನೇಕವರ್ಷಗಳನಂತರಈಜುಸ್ಪರ್ಧೆಆಯೋಜನಗೊಂಡಿದ್ದು ವಿಶೇಷ. ನಗರದಲ್ಲಿ ಅನೇಕ ಉತ್ತಮ ಕೆಲಸ ಮಾಡುತ್ತಿರುವ ರೋಟರಿ ಸಂಸ್ಥೆಯವರು ಇಂತಹ ಸ್ಪರ್ಧೆಯನ್ನು ಏರ್ಪಡಿಸಿ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ ಎಂದರು.

ಈಜು ಕೇವಲ ನೀರಾಟವಲ್ಲ. ಇದು ಆರೋಗ್ಯಕಾರಿ ಕ್ರೀಡೆ. ದೈಹಿಕ ಕ್ರಿಯಾಶೀಲತೆಗೆ ಈಜು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಇದರಲ್ಲಿ ಪ್ರಾಣಾಯಾಮವಿದೆ, ಯೋಗವಿದೆ, ವ್ಯಾಯಾಮವಿದೆ ಹಾಗಾಗಿ ಪಾಲಕರು ಮತ್ತು ಪೋಷಕರು ತಮ್ಮ ಮಕ್ಕಳನ್ನು ಈಜು ಕಲಿಸಲು ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

■ ರೋಟರಿ ಕ್ಲಬ್ ವತಿಯಿಂದ ತಾಲೂಕು ಮಟ್ಟದ ಈಜು ಸ್ಪರ್ಧೆ ಆಯೋಜನೆ

ರೋಟರಿ ಕ್ಲಬ್ ಅಧ್ಯಕ್ಷ ಶ್ರೀನಿವಾಸ ನಾಯ್ಕ ಸ್ವಾಗತಿಸಿದರು. ಅರುಣ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು.

ಖಜಾಂಚಿ ವಿನಾಯಕ ಶೇಟ್, ಎಕ್ಸಿಕೇಟಿವ್ ಸೆಕ್ರೆಟರಿ ಸತೀಶ ಭಟ್ಟ ನಾಡಗುಳಿ, ಇನ್ನರ್‌ವೀಲ್ ಕಾರ್ಯದರ್ಶಿ ಸಂಧ್ಯಾ ನಾಯ್ಕ, ಈಜು ತರಬೇತಿದಾರ ಯೋಗೇಶ ಕುರುಬರ್, ರೋಟರಿ ಸದಸ್ಯರು ಇದ್ದರು. ಗಣೇಶ ಕೂರ್ಸೆ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕಾರ್ಯದರ್ಶಿ ಹರೀಶ ಹೆಗಡೆ ವಂದಿಸಿದರು.



# ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನ ಪ್ರಕ್ರಿಯೆಯಲ್ಲಿನ ಗೊಂದಲ ಬಗೆಹರಿಸಿ

## ಸಚಿವರಿಗೆ ಅರಣ್ಯ ಭೂಮಿ ಸಾಗುವಳಿದಾರರ ಹೋರಾಟ ಸಮಿತಿ ಮನವಿ

• **ಕನ್ನಡಪ್ರಭ ವಾರ್ತೆ** ಹೊನ್ನಾವರ

ಉತ್ತರ ಕನ್ನಡ ಜಿಲ್ಲಾ ಅರಣ್ಯ ಭೂಮಿ ಸಾಗುವಳಿದಾರರ ಹೋರಾಟ ಸಮಿತಿಯ ಅಧ್ಯಕ್ಷ ಚಂದ್ರಕಾಂತ ಕೊಚರೇಕರ ನೇತೃತ್ವದ ನಿಯೋಗ ಜಿಲ್ಲಾ ಉಸ್ತುವಾರಿ ಸಚಿವರನ್ನು ಇಲ್ಲಿನ ಅವರ ಕಚೇರಿಯಲ್ಲಿ ಭೇಟಿಯಾಗಿ ಅರಣ್ಯ ಹಕ್ಕು ಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿನ ಗೊಂದಲ ಬಗೆಹರಿಸುವ ಸಂಬಂಧ ವಿಸ್ತ್ರತ ಚರ್ಚೆ ನಡೆಸಿತು.

ನಂತರ ಸಚಿವ ವೈದ್ಯ ಹೋರಾಟ ಪ್ರಮುಖರೊಂದಿಗೆ ಉನ್ನತಾಧಿಕಾರ ಮಟ್ಟದ ಜಂಟಿ ಸಂವಾದ ಸಭೆ ನಡೆಸಲು ಸಮ್ಮತಿಸಿದ್ದು, ಜಿಲ್ಲಾಧಿಕಾರಿ ಉಪಸ್ಥಿತಿಯಲ್ಲಿ ಅರಣ್ಯ ಹಕ್ಕು ಹೋರಾಟ ಪ್ರಮುಖರೊಂದಿಗೆ ಉನ್ನತಾಧಿಕಾರ ಮಟ್ಟದ ಸಂವಾದ ಸಭೆ ಏರ್ಪಡಿಸಿ, ಅರಣ್ಯ ಹಕ್ಕುಕಾಯ್ದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಉಂಟಾಗಿರುವ ಗೊಂದಲ ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಸದ್ಯದಲ್ಲೇ ಮಾಡುವುದಾಗಿ ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯ ಈ ಪ್ರಮುಖ ಸಮಸ್ಯೆಯನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಚಂದ್ರಕಾಂತ ಕೊಚರೇಕರಸಚಿವರಿಗೆಸಲ್ಲಿಸಿದಮನವಿಯಲ್ಲಿಆಗ್ರಹಿಸಿದ್ದಾರೆ.



■ ಜಿಲ್ಲೆಯ ಈ ಪ್ರಮುಖ ಸಮಸ್ಯೆಯನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಒತ್ತಾಯ

ನಿಯೋಗದಲ್ಲಿ ಹೋರಾಟ ಸಮಿತಿಯ ತಾಲೂಕು ಘಟಕದ ಅಧ್ಯಕ್ಷ ಶ್ರೀಧರ ಶೆಟ್ಟಿ ಹಿರೇಬೈಲ, ವಾಮನ ನಾಯ್ಕ ಮಂಕಿ, ಅಶ್ಫಕ್ ಶೇಖ್, ಶ್ರೀಕಾಂತ ನಾಯ್ಕ ಗುಂಡಿಬೈಲ, ಮಂತು ಫರ್ನಾಂಡಿಸ್ ಜನಕಡ್ಕಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ಎಸ್. ನಾಯ್ಕ, ಸಂಕೇತ ನಾಯ್ಕ ಮತ್ತಿತರರಿದ್ದರು.

# ಲಂಚಕ್ಕೆ ಬೇಡಿಕೆ, ಲೋಕಾಕ್ಕೆ ದೂರು

**ಮುಂಡಗೋಡ:** ಹಳೆ ಮನೆ ಕಟ್ಟಿಗೆಯನ್ನು ಪಂಚನಾಮೆ ಮಾಡಲು ಉಪ ವಲಯ ಅರಣ್ಯಾಧಿಕಾರಿ ಹಾಗೂ ಬೀಟ್ ಗಾರ್ಡ್ ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಿ ತಾಲೂಕಿನ ಉಗ್ಗಿನಕೇರಿ ಗ್ರಾಮದ ರಮೇಶ ವಾಲ್ಮೀಕಿ ಲೋಕಾಯುಕ್ತರಿಗೆ ದೂರು ನೀಡಿದ್ದಾರೆ.

ಗುಂಜಾವತಿ ಉಪ ವಲಯ ಅರಣ್ಯಾಧಿಕಾರಿ ಬಸವರಾಜ ಯಾದವಾಡ ಹಾಗೂ ಉಗ್ಗಿನಕೇರಿ ವನರಕ್ಷಕ ಪಾಷಾ ಎಂಬುವರ ಮೇಲೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಉಗ್ಗಿನಕೇರಿ ಗ್ರಾಮದ ರಮೇಶ ಫಕ್ಕೀರಪ್ಪ ವಾಲ್ಮೀಕಿ ಎಂಬವರು ಶಿಥಿಲಾವಸ್ಥೆಯಲ್ಲಿದ್ದ ತಮ್ಮ ಹಳೆಯ ಮನೆಯನ್ನು ನೆಲಸಮಗೊಳಿಸಿ ಹೊಸ ಮನೆ ಕಟ್ಟಲು ನಿರ್ಧರಿಸಿ ಮನೆಗೆ ಅಳವಡಿಸಲಾದ ಹಳೆಯ ಕಟ್ಟಿಗೆಯನ್ನು ಮರು ಬಳಕೆಗೆ ಅನುಮತಿ ನೀಡುವಂತೆ ಮುಂಡಗೋಡ ವಲಯ ಅರಣ್ಯಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದರು. ಈ ಬೆನ್ನಲ್ಲೆ ಕಟ್ಟಿಗೆ ಪಂಚನಾಮೆ ಮಾಡಲು ಸ್ಥಳಕ್ಕಾಗಮಿಸಿದ ಫಾರೆಸ್ಟ್ ಗಾರ್ಡ ಕಟ್ಟಿಗೆಗಳ ಅಳತೆ ಮಾಡಿಕೊಂಡು ಹೋದರಲ್ಲದೇ ಬಳಿಕ ತಮ್ಮ ಗುಂಜಾವತಿ ಉಪ ವಲಯ ಅರಣ್ಯಾಧಿಕಾರಿ ಕಚೇರಿಗೆ ಕರೆಸಿ ನಿಮ್ಮ ಕೆಲಸ ಮಾಡಿಕೊಡಬೇಕಾದರೆ ₹10 ಸಾವಿರ ನೀಡುವಂತೆ ಬೇಡಿಕೆ ಇಟ್ಟಿದ್ದರು ಎಂದು ರಮೇಶ ವಾಲ್ಮೀಕಿ ಲೊಕಾಯುಕ್ತರಿಗೆ ದೂರು ಸಲ್ಲಿಸಿದ್ದಾರೆ ಎನ್ನಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಸ್ಥಾನದಲ್ಲಿರುವ ಅರಣ್ಯ ಇಲಾಖೆ ಸಿಬ್ಬಂದಿಗೆ ಲೊಕಾಯುಕ್ತರು ನೋಟಿಸ್ ನೀಡಿದ್ದು, ತನಿಖೆ ಆರಂಭಿಸಿದ್ದಾರೆ. ಸೂಕ್ತ ತನಿಖೆಯಿಂದ ಸತ್ಯ ಹೊರಬರಬೇಕಿದೆ.

**ಫಲಾನುಭವಿ ಅರ್ಜಿ ಸಲ್ಲಿಸಿದ ಹಿನ್ನೆಲೆ ಕಾನೂನು ಪ್ರಕಾರ ಪಂಚನಾಮೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗಿತ್ತು. ಅವರ ಅರ್ಜಿ ತಿರಸ್ಕೃತಗೊಂಡಿದೆ. ಇದರಿಂದ ನಮ್ಮ ಮೇಲೆ ದುರುದ್ದೇಶದಿಂದ ದೂರು ನೀಡಿದ್ದಾರೆ. ಲೋಕಾಯುಕ್ತರು ನಮಗೆ ನೋಟಿಸ್ ನೀಡಿದ್ದು, ಅದಕ್ಕೆ ಉತ್ತರ ನೀಡುತ್ತೇವೆ.**

• **ಬಸವರಾಜ ಯಾದವಾಡ** ಉಪ ವಲಯ ಅರಣ್ಯಾಧಿಕಾರಿ